ಡಾ॥ ಹೆಚ್.ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಶೂನ್ಯ

ಆ) ಪ್ರಶ್ನೆ ಇಲ್ಲ

ಇ) ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಮೂಲಕ ಹಾಗೂ ಸ್ನಾತಕೋತ್ತರ ಪದವಿ ಶಿಕ್ಷಣ ಮುಂಗಡಿಸಿಕೊಂಡು ಬರುವ ಸೇವೆಯಲ್ಲಿರುವ ವೈದ್ಯರುಗಳ ಮರು ತೈನಾತಿ ಮೂಲಕ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಈ) ಇಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿ ಸಂಯುಕ್ತ ಆಸ್ಪತ್ರೆ ಶಿಕಾರಿಪುರ ಸೇರಿದಂತೆ ೯ ಪ್ರಾಥಮಿಕ ಆರೋಗ್ಯ ಘಟಕಗಳಿವೆ, ಶಿಕಾರಿಪುರ ವಿನಹ ಬೇರೆ ಪ್ರಾಥಮಿಕ ಆರೋಗ್ಯ ಘಟಕಗಳಿಗೆ ಮಹಿಳಾ ವೈದ್ಯರ ಹುದ್ದೆ ಮಂಜೂರಾಗಿರುವುದಿಲ್ಲಾ. ಪ್ರಾಥಮಿಕ ಆರೋಗ್ಯ ಕೇಂದ್ರ ಸಿರಾಳಕೊಪ್ಪದಲ್ಲಿ ಪುರಂಷ ಹಾಗೂ ಮಹಿಳಾ ವೈದ್ಯಾಧಿಕಾರಿಗಳಿದ್ದಾರೆ. ಪ್ರಾಥಮಿಕ ಆರೋಗ್ಯ ಘಟಕಗಳಲ್ಲಿ ಮಹಿಳಾ ವೈದ್ಯರ ಹುದ್ದೆಯೇ ಇರುವುದಿಲ್ಲ ಆದ್ದರಿಂದ ಮಹಿಳಾ ವೈದ್ಯರುಗಳನ್ನು ಆರೋಗ್ಯ ಘಟಕಗಳಿಗೆ ಹಾಕಂತ್ತೇವೆಂದು ಆಶ್ವಾಸನೆ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಮಾನ್ಯ ಮಂತ್ರಿಯವರು ಸಮರ್ಪಕವಾಗಿ ಉತ್ತರ ಕೊಟ್ಟಿಲ್ಲ. ಶಿಕಾರಿಪುರ ತಾಲ್ಲೂಕಿನಲ್ಲಿರುವ ೯ ಪ್ರಾಥಮಿಕ ಘಟಕಗಳಲ್ಲಿ ೬ ಘಟಕಗಳಲ್ಲಿ ವೈದ್ಯರಿಲ್ಲವೆಂದು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ ಮಾನ್ಯ ಮಂತ್ರಿಯವರು ಅಧಿವೇಶನ ಮುಂಗಿಯವುದರೊಳಗೆ ವೈದ್ಯರನ್ನು ನೇಮಕ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದರೂ ಇದುವರೆವಿಗೂ ನೇಮಕ ಮಾಡಿಲ್ಲ.

ಶ್ರೀ ಡಿ. ಬಿ. ಇನಾಂದಾರ್.—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಲೋಕಸೇವಾ ಆಯೋಗದವರಿಗೆ ೧೫೦ ವೈದ್ಯರ ಹುದ್ದೆಗಳನ್ನು ತುಂಬಬೇಕೆಂದು ತಿಳಿಸಿದ್ದೇವೆ. ಅಲ್ಲಿಂದ ಬಂದ ಕೂಡಲೆ ಖಾಲಿ ಇರತಕ್ಕ ಜಾಗಗಳಿಗೆ ವೈದ್ಯರುಗಳನ್ನು ಹಾಕಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಶಿಕಾರಿಪುರ ತಾಲ್ಲೂಕಿನಲ್ಲಿರುವ ಕಂಬೈನ್ಡ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ವೈದ್ಯರು ಲಾಂಗ್ ಲೀವ್ ಹಾಕಿ ಹೋಗಿದ್ದಾರೆ. ಆ ಜಾಗಕ್ಕೆ ಒಬ್ಬರು ಮಹಿಳಾ ವೈದ್ಯರನ್ನು ಹಾಕಿಂಪುದು ಬೇಡವೆ ? ೧೫೦-೧೬ ಸಾವಿರ ರೂಪಾಯಿಂಗಳ ಔಷಧಿಯನ್ನು ಕೊಡುತ್ತಿದ್ದೀರಿ, ಅದೆಲ್ಲಾ ಹಾಳಾಗಿ ಹೋಗುತ್ತಿದೆ. ತಾಲ್ಲೂಕಿನ ಜನಕ್ಕೆ ತಾನು ಏನು ಉತ್ತರ ಕೊಡಲಿ? ಹತ್ತು ಜನ ಇರುವ ಕಡೆ ಒಬ್ಬಬ್ಬರನ್ನು ತೆಗೆದು ಖಾಲಿ ಇರತಕ್ಕ ಜಾಗಗಳಿಗೆ ಹಾಕಿ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಈ ತಿಂಗಳು ೧೭ರಂದು ಸಂದರ್ಶನ ನಡೆಯಲಿದೆ. ಮಾರ್ಚ್ ೩೧ರೊಳಗೆ ಖಾಲಿ ಇರತಕ್ಕ ಜಾಗಗಳಿಗೆ ವೈದ್ಯರನ್ನು ನೇಮಕ ಮಾಡುತ್ತೇವೆ.

ಅಧ್ಯಕ್ಷರು.—ವಸಂತ ಬಂಗೇರಾ ಗೈರುಹಾಜರಿ.

ಪ್ರತಾಪಚಂದ್ರಶೆಟ್ಟಿ ಗೈರು ಹಾಜರಿ.

ಶ್ಯಾನಪ್ಪ ಗೈರು ಹಾಜರಿ.

ಎಂ. ವೀರಯ್ಯ ಸ್ವಾಮಿ ಗೈರು ಹಾಜರಿ.

ರಾಜ್ಯದಲ್ಲಿ ಕುಷ್ಠರೋಗ ಪೀಡಿತರನ್ನು ಗುರುತಿಸುವುದು

೩೭೩. ಶ್ರೀ ಬಿ. ರಾಜುಗೌಡ (ಪನೂರು).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುಷ್ಠ ರೋಗಿಗಳಿದ್ದಾರೆ?

ಆ) ಕುಷ್ಠ ರೋಗವನ್ನು ಗುರುತಿಸುವ ಜವಾಬ್ದಾರಿಯನ್ನು ಯಾರಿಗೆ ವಹಿಸಲಾಗಿದೆ?

೫) ಅನೇಕ ಕಾರ್ಯಗಳನ್ನು ಮಾಡಲು ನಿಯೋಜಿಸಿರುವವರಿಗೆ ಕುಷ್ಠರೋಗಗಳನ್ನು ಪತ್ತೆ ಹಚ್ಚುವ ಕೆಲಸವನ್ನು ವಹಿಸಿರುವುದರಿಂದ ಕೆಲಸ ಸಮರ್ಪಕವಾಗಿ ನಡೆಯುತ್ತಿದೆಯೆ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ರಾಜ್ಯದ ಈ ಕೆಳಕಂಡ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕುಷ್ಠ ರೋಗಿಗಳಿದ್ದಾರೆ. ಅಂದರೆ ಪ್ರತಿ ಸಾವಿರ ಪ್ರಜಾ ಸಂಖ್ಯೆಗೆ ಐದು ಮಂದಿಗಿಂತ ಜಾಸ್ತಿಯಿರುವ ತಾಲ್ಲೂಕು ಮತ್ತು ಸಂಖ್ಯೆಗಳು ಈ ರೀತಿ ಇವೆ.

ಸಂಖ್ಯೆ	ಜಿಲ್ಲೆ		ತಾಲ್ಲೂಕು	ಕುಷ್ಠ ರೋಗಿಗಳ ಅಂದಾಜು ಸಂಖ್ಯೆ
೧.	ಬೆಂಗಳೂರು	೧)	ಆನೇಕಲ್	೯೩೨
		೨)	ಕನಕಪುರ	೯೯೬
೨.	ಬೀದರ್	೧)	ಬೀದರ್	೬೦೫೩
		೨)	ಹುಮನಾಬಾದ್	೧೪೫೯
		೩)	ಭಾಲ್ಕಿ	೧೬೭೨
		೪)	ಔರಾದ್	೧೮೫೯
		೫)	ಬಸವಕಲ್ಯಾಣ	೧೧೧೫
೩.	ಬಿಜಾಪುರ	೧)	ಬಾದಾಮಿ	೩೫೯೮
		೨)	ಬಿಜಾಪುರ	೨೯೯೭
೪.	ಬೆಳಗಾವಿ	೧)	ಬೆಳಗಾವಿ	೨೮೫೬
		೨)	ಹುಕ್ಕೇರಿ	೧೪೨೯
		೩)	ರಾಯದುರ್ಗ	೧೦೨೦
೫.	ಬಳ್ಳಾರಿ	೧)	ಕೂಡ್ಲಿಗಿ	೨೦೯೨
		೨)	ಹರಪನಹಳ್ಳಿ	೨೧೧೪
		೩)	ಹೂವಿನ ಹಡಗಲಿ	೧೧೦೦
		೪)	ಬಳ್ಳಾರಿ	೨೨೭೪
೬.	ಚಿತ್ರದುರ್ಗ	೧)	ಮೊಳಕಾಲ್‌ಮೂರು	೪೦೭
೭.	ಧಾರವಾಡ	೧)	ಹಾವೇರಿ	೧೦೯೭
		೨)	ರೋಣ	೧೦೪೫
		೩)	ರಾಣೆಬೆನ್ನೂರು	೧೨೩೩
		೪)	ಶಿರಹಟ್ಟಿ	೧೫೩೦
		೫)	ಹುಬ್ಬಳ್ಳಿ	೧೧೩೩
೮.	ದಕ್ಷಿಣ ಕನ್ನಡ	೧)	ಕುಂದಾಪುರ	೧೪೩೨
		೨)	ಮಂಗಳೂರು	೨೨೯೪
೯.	ಗುಲ್ಬರ್ಗ	೧)	ಆಲಂದ್	೧೯೪೪
		೨)	ಚಿಂಚೋಳಿ	೧೨೯೫
		೩)	ಸೇಡಂ	೧೫೫೨
		೪)	ಯಾದ್‌ಗಿರ್	೨೨೪೯
		೫)	ಶೋರಾಪುರ್	೩೫೬೦
		೬)	ಷಹಪುರ್	೨೩೨೮
		೭)	ಜೇವರ್ಗಿ	೧೩೬೭
೧೦.	ಕೋಲಾರ	೧)	ಗೌರಿಬಿದನೂರು	೯೬೫
೧೧.	ಮಂಡ್ಯ	೧)	ಮಳವಳ್ಳಿ	೨೬೧೦

1	2	3	4
೧೨.	ಮೈಸೂರು	೧) ಟಿ. ನರಸೀಪುರ	೧೨೮೫
		೨) ಕೋಲ್ಲೇಗಾಲ	೬೬೦೫
		೩) ಯಳಂದೂರು	೧೪೫೧
		೪) ಚಾಮರಾಜನಗರ	೩೯೧
೧೩.	ರಾಯಚೂರ್	೧) ರಾಯಚೂರ್	೧೨೮೩
		೨) ಮಾನ್ವಿ	೧೨೭೦
		೩) ದೇವದುರ್ಗ	೧೩೮೭
		೪) ಲಿಂಗಸೂಗೂರು	೧೫೭೭
		೫) ಗಂಗಾವತಿ	೨೩೦೨
		೬) ಕೊಪ್ಪಳ್	೨೩೨೯
		೭) ಸಿಂಧನೂರು	೧೩೧೮
		೮) ಯಲಬುರ್ಗ	೩೧೮೪
		೯) ಕಂಪ್ಲಗಿ	೨೮೧೩
೧೪.	ತುಮಕೂರು	೧) ಮಧುಗಿರಿ	೧೨೧೬

ಆ) ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಆರೋಗ್ಯ ಕಾರ್ಯಕರ್ತರು ಪಂನೆ ವಂನೆಗೆ ಭೇಟಿ ನೀಡುವ ಕಾಲದಲ್ಲಿ ಯಾರಾದರು ಚರ್ಮರೋಗ ಸಂಬಂಧವಾದ ತಾಯಿಲೆ ಇದೆಯೆ? ಎಂಬುದನ್ನು ತಿಳಿದು ಅನುಮಾನ ಬಂದರೆ ಅದು ಕುಷ್ಠರೋಗವೇ ಅಥವಾ ಬೇರೆವಿಧವಾದ ವ್ಯಾಧಿಯೇ ಎಂಬುದನ್ನು ಸ್ಥಳೀಯ ಆರೋಗ್ಯ ಘಟಕದ ಪ್ರಾಥಮಿಕ ಆರೋಗ್ಯ ಕೇಂದ್ರದ ಹಾಗೂ ಕುಷ್ಠರೋಗ ನಿವಾರಣಾ ಕೇಂದ್ರದ ವೈದ್ಯಾಧಿಕಾರಿಗಳಿಂದಲೂ ಮತ್ತು ನುರಿತ ಕುಷ್ಠರೋಗ ಕಾರ್ಯಕರ್ತರಿಂದಲೂ ಧೃಡೀಕರಿಸುತ್ತಾರೆ. ನಗರ ಪ್ರದೇಶದಲ್ಲಿ ನಗರ ಕುಷ್ಠರೋಗದ ವೈದ್ಯಕೀಯ ಹಾಗೂ ನುರಿತ ಕುಷ್ಠರೋಗ ಕಾರ್ಯಕರ್ತರು ಈ ಜವಾಬ್ದಾರಿಯನ್ನು ನಿರ್ವಹಿಸುವರು.

ಅಲ್ಲದೆ ಸ್ವಯಂಸೇವಾ ಸಂಸ್ಥೆಗಳು ಸಹ ಈ ಕಾರ್ಯದಲ್ಲಿ ರಾಜ್ಯದ ಕೆಲವೆಡೆ ಕುಷ್ಠರೋಗಿಗಳನ್ನು ಗುರುತಿಸುವ ಜವಾಬ್ದಾರಿಯನ್ನು ಸಹ ನಿರ್ವಹಿಸುತ್ತಿರುತ್ತಾರೆ.

ಇ) ಆರೋಗ್ಯ ಕಾರ್ಯಕರ್ತರಿಗೆ ಭೇಟಿ ನೀಡುವ ಮತ್ತು ವಿಯೋಜಿಸಿರುವ ಹಳ್ಳಿಗಳು ಮತ್ತು ಜನ ಸಮೂಹದಾಯ ಬಹಳ ಕಡಿಮೆ. ಅಂದರೆ ಐದು ಸಾವಿರ ಜನಸಂಖ್ಯೆಯಂಳ್ಳ ಹಳ್ಳಿಗಳಿಗೆ ಒಬ್ಬ ಕಾರ್ಯಕರ್ತರು ಇರುತ್ತಾರೆ. ಇವರುಗಳು ಆಲ್ಲಿ ಮೇಲ್ವಿಚಾರಣಾ ಕಾರ್ಯಕ್ಕೆ ಮತ್ತು ವೆರವಿಗೆ ಪರಿವೀಕ್ಷಕರು ಕುಷ್ಠರೋಗದಲ್ಲಿ ನುರಿತಿರುವ ವೈದ್ಯಕೀಯ ಹಾಗೂ ಇತರ ಸಿಬ್ಬಂಧಿ ವರ್ಗದವರು ಈ ಕೆಲಸವನ್ನು ಪರಿಶೀಲಿಸಿ ಸಮರ್ಪಕವಾಗಿ ನಡೆಯುವಂತೆ ಕಾರ್ಯಕರ್ತರಿಗೆ ಸೂಕ್ತ ನಿರ್ದೇಶನ ತಿಳುವಳಿಕೆ ನೀಡಿ ಕುಷ್ಠರೋಗಗಳನ್ನು ಪತ್ತೆ ಹಚ್ಚುವ ಮತ್ತು ಅವರಿಗೆ ಔಷಧಿ ನೀಡುವ ಕಾರ್ಯದಲ್ಲಿ ಪ್ರವರ್ತರಾಗುವಂತೆ ಆದೇಶ ನೀಡಲಾಗಿದೆ.

ಅಲ್ಲದೆ ಕುಷ್ಠರೋಗದ ಉಲ್ಬಣ ಕ್ಷೇತ್ರಗಳಲ್ಲಿ ಕಾರ್ಯಕರ್ತರು ಕುಷ್ಠರೋಗಗಳನ್ನು ಪತ್ತೆ ಹಚ್ಚುವ ಕಾರ್ಯವನ್ನು ಮಾತ್ರ ಜಾರಿಗೊಳಿಸುವ ಯೋಜನೆಯು ಪರಿಶೀಲನೆಯಲ್ಲಿದೆ.

ಶ್ರೀ ಬಿ. ರಾಜುಗೌಡ.–ಇಡೀ ರಾಜ್ಯದಲ್ಲಿ ಅತೀ ಹೆಚ್ಚಿನ ಕುಷ್ಠ ರೋಗಿಗಳು ನಮ್ಮ ಕೊಳ್ಳೇಗಾಲ ತಾಲ್ಲೂಕಿನಲ್ಲಿದ್ದಾರೆ. ಹತ್ತು ವರ್ಷದ ಹಿಂದಿಗಿಂತ ಜಾಸ್ತಿ ಇದೆಯೇ ಅಥವಾ ಕಡಿಮೆ ಇದೆಯೆ? ದೇಶದ ಸರಾಸರಿಗಿಂತ ನನ್ನ ತಾಲ್ಲೂಕಿನಲ್ಲಿ ಜಾಸ್ತಿ ಇದ್ದಾರೆಯೇ ಎಂಬುದನ್ನು ತಿಳಿಸಬೇಕು?. ಕುಷ್ಠ ರೋಗ ತರಬೇತಿ ಕೇಂದ್ರವನ್ನು ಕೊಳ್ಳೇಗಾಲದಲ್ಲಿ ಮಾಡಿದ್ದೀರಿ. ಅದು ಹೆಸರಿಗೆ ಮಾತ್ರ ಇದೆ. ಅಲ್ಲಿ ಟೇಬಲ್, ಖುರ್ಚಿ, ಜವಾನರು ಮಾತ್ರ ಇದ್ದಾರೆ, ನೌಕರರು ಇಲ್ಲ. ಅದು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮಾನ್ಯ ಸದಸ್ಯರು ಹೇಳುವುದು ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ಸರಿಯಾದ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ. ರಾಜುಗೌಡ.—ಆರೋಗ್ಯ ಕಾರ್ಯಕರ್ತರನ್ನು ಬಿಟ್ಟು ಕುಷ್ಠರೋಗವನ್ನು ಪತ್ತೆ ಹಚ್ಚಿಸುವ ಕಾರ್ಯವನ್ನು ಬಿಟ್ಟು ತರಬೇತಿ ಹೊಂದಿರುವ ನೌಕರರನ್ನು ಈ ಕೆಲಸಕ್ಕೆ ಗೊತ್ತು ಮಾಡಿದರೆ ಹೆಚ್ಚಿನ ಕುಷ್ಠರೋಗಿಗಳು ಪತ್ತೆಯಾಗುವುದಕ್ಕೆ ಸಾಧ್ಯವಾಗಂತ್ತದೆ. ಮತ್ತು ರೋಗ ಕೂಡ ಗುಣವಾಗುತ್ತದೆ. ಇದು ಸಾಧ್ಯವೋ ಇಲ್ಲವೋ ತಿಳಿಸಿ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಈ ಅಭಿಪ್ರಾಯಂ ನಮ್ಮಲ್ಲಿ ಮುಂಚಿನಿಂದಲೂ ಇತ್ತು. ಕೇಂದ್ರ ಸರ್ಕಾರದಿಂದ ಅದಕ್ಕೆ ಬೇರೆ ವ್ಯವಸ್ಥೆ ಮಾಡತಕ್ಕ ಅಗತ್ಯವಿಲ್ಲ. ಕುಷ್ಠರೋಗಿಗಳು ಎಲ್ಲಿ ಇದ್ದಾರೆ ಅವರನ್ನು ಪತ್ತೆ ಮಾಡುವ ಕಾರ್ಯವನ್ನು ಮಾನ್ಯ ಸದಸ್ಯರ ಸಲಹೆಯಂತೆ ಮಾಡುತ್ತಿದ್ದೇವೆ. ಈ ಬಗ್ಗೆ ತಜ್ಞರು ಏನಾದರೂ ಸಲಹೆ ಮಾಡಿದರೆ ಅದನ್ನು ಪರಿಶೀಲಿಸಂತ್ತೇನೆ.

ಮೈಸೂರಿನಲ್ಲಿ ನರಗಳ ಶಸ್ತ್ರ ಚಿಕಿತ್ಸಾ ವಿಭಾಗವನ್ನು ತೆರೆಯುವುದು.

೬೦೯. ಶ್ರೀಮತಿ ಮುಖ್ತಿರುನ್ನಿಸಾ (ನರಸಿಂಹರಾಜ).— ಮಾನ್ಯ ಆರೋಗ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರಿನಲ್ಲಿ ನರಗಳ ಶಸ್ತ್ರಚಿಕಿತ್ಸಾ ವಿಭಾಗವನ್ನು ತೆರೆಯಬೇಕೆಂದಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ. ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

SMT. MUKHTHARUNISA BAGAM.—Sir, whether they the Hon'ble Minister is aware that the population of Mysore is more than six and a half lakh and K. R. Hospital is the oldest institution in Mysore. And Whether it has come to the Notice of the Hon'ble Minister for Health, that large number of persons are subffering head injuries because of the accidents and as an emergent action, it is very difficult to bring them to Bangalore since there is no Neurosurgical Department at K. R Hospital or any other hospital and several injured persons die on the spot. The need for a Neurosurgical Department is a long pending case. I therefore urge upon the Hon'ble Minister for Health that Neurosurgical Department should be opened in K. R. Hospital. I would like to know as to why the Minister has not taken proper action in this regard ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಮೈಸೂರಿನ ಕೆ. ಆರ್. ಆಸ್ಪತ್ರೆಯಲ್ಲಿ ನರಗಳ ಶಸ್ತ್ರ ಚಿಕಿತ್ಸಾ ವಿಭಾಗ ಇದೆ. ಆದರೆ ಅಲ್ಲಿ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳು ಖಾಲಿ ಇವೆ. ತರಬೇತಿ ಹೊಂದಿದ ಅಭ್ಯರ್ಥಿಗಳು ಇಲ್ಲದೆ ಇರುವುದರಿಂದ ಅವರನ್ನು ತರಬೇತಿಗೆ ಕಳುಹಿಸತಕ್ಕ ಪ್ರಯತ್ನ ಮಾಡಿದ್ದೇವೆ. ನಮ್ಮ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕಿಲ್ಲ. ನಮಗೆ ಇದರಲ್ಲಿ ತರಬೇತಿ ಹೊಂದಿದ ವೈದ್ಯರು ಸಿಕ್ಕಿದ ತಕ್ಷಣ ಕೆ. ಆರ್. ಆಸ್ಪತ್ರೆಯಲ್ಲಿ ಅದರ ಕೆಲಸ ಪ್ರಾರಂಭವ ಮಾಡುತ್ತೇವೆ.

ಶ್ರೀಮತಿ ಮುಖ್ತಿರುನ್ನೀಸಾ.— ಅದು ಬಹಳ ಮುಖ್ಯವಾದ ವಿಭಾಗ. ಅದರ ಬಗ್ಗೆ ಎಲ್ಲರೂ ಕೇಳುತ್ತಿದ್ದಾರೆ. ಏತಕ್ಕೆ ಇದುವರೆಗೆ ಆ ವಿಭಾಗವನ್ನು ತೆರೆದಿಲ್ಲವೆಂದು ಆಕ್ಷೇಪ ಮಾಡುತ್ತಿದ್ದಾರೆ.